ಉಪನಿಷನ್ಮಾಲಾ

ಪುಷ್ಪ—೨

ತಲವಕಾರ

(ಕೇನ)

ಗ್ರಂಥಕರ್ತರು :
ವಿದ್ವಾನ್ ಹೆಚ್. ಎನ್. ರಾಘವೇಂದ್ರಾಚಾರ್, ಎಂ.ಎ., ಡಿ.ಒ.ಸಿ.
ಅರಮನೆ ಧರ್ಮಾಧಿಕಾರಿಗಳು

ತಲವಕಾರ

(ಕೇನ)

and

Maharaja's College, Mysore

ಕೊಟ್ಟರೆ ಅಥವಾ ಅದನ್ನು ತಪ್ಪೆಂದು ಹೇಳುವ ಜ್ಞಾನಾಂತರವು ಹುಟ್ಟುವ ಸಂಭವವಿದ್ದರೆ ಸಫಲವಾದ ಪ್ರವೃತ್ತಿಯು ಹುಟ್ಟುವುದಿಲ್ಲ.

ಈ ಪ್ರಾಮಾಣ್ಯ ಪರೀಕ್ಷೆಯು ಪ್ರಸಕ್ತವಾದ ಜ್ಞಾನದ ವಿಷಯದಲ್ಲಿ ಉಂಟಾದರೆ ಆ ಜ್ಞಾನವು ಕೇವಲ ಕಲ್ಪನೆ ರೂಪವಾದುದರಿಂದ ಅದು ಪ್ರಾಮಾಣ್ಯವುಳ್ಳದಾಗಿ ಸಿದ್ಧಿಸುವುದಿಲ್ಲ. ಅದು ನಿರ್ಮೂಲವಾಗುವುದು. ಲೌಕಿಕಾನುಭವವು ಅದಕ್ಕೆ ಮೂಲವಾಗುವುದಿಲ್ಲ. ಸರ್ವನಿಯಾಮಕ ವಸ್ತುವಿನ ಪ್ರಸ್ತಾಪವೇ ಲೌಕಿಕಾನುಭವಕ್ಕೆ ಸಂಗತವಲ್ಲ. ಸರ್ವನಿಯಾಮಕ ಎಂಬ ಭಾವವು ಶ್ರುತಿಸಂಪ್ರದಾಯ ಮೂಲಕವಾದುದೆಂದು ವಿಶೇಷ ಪರೀಕ್ಷೆಯಿಂದ ವಿದಿತವಾಗುವುದು.

ಶ್ರುತಿಸಂಪ್ರದಾಯವನ್ನು ಕಲ್ಪನೆ ಎಂದೇಕೆ ಕರೆಯಬಾರದು? ಎಂಬ ಪ್ರಶ್ನೆ ಹುಟ್ಟಬಹುದು. ಲೌಕಿಕ ಪ್ರಸಂಗಕ್ಕೂ ಶ್ರುತಿಗೂ ವ್ಯತ್ಯಾಸವಿರುವುದು. ಲೌಕಿಕವಾಗಿ ಸರ್ವನಿಯಾಮಕ ವಸ್ತುವಿನ ವಿಚಾರವು ಸ್ವವ್ಯಾಹತ ಭಾವಗಳಿಂದ ಒಡಗೂಡಿರುವುದು ಮತ್ತು ಮೂಲಪ್ರಮಾಣ ರಹಿತವಾಗಿರುವುದು. ಸರ್ವನಿಯಾಮಕವಾದುದು ಇದು ಎಂದು ಹೇಳುವವನೇ ಅದಕ್ಕೆ ಒಂದು ನಿಯಾಮಕವನ್ನು ಹೇಳಬೇಕಾಗುವುದು ಮತ್ತು ಸರ್ವನಿಯಾಮಕ ಎಂಬ ಭಾವಕ್ಕೆ ಪ್ರತಿಷ್ಠಾಪಕವಾದ ಯಾವ ಭಾವವೂ ಅವನ ಅನುಭವಕ್ಕೆ ಬರುವುದಿಲ್ಲ. ಲೌಕಿಕವಾಗಿ ಒಂದು ಕಾರ್ಯಕ್ಕೆ ಅನೇಕ ಕಾರಣಗಳು ಕಾಣುವುದಕ್ಕೆ ಇದೇ ನಿಮಿತ್ತ. ಇಂತಹ ಸನ್ನಿವೇಶದಲ್ಲಿ ಸರ್ವನಿಯಾಮಕವಾದ ವಸ್ತುವಿನ ಎಂದರೆ ಎಲ್ಲ ಕಾರಣವೂ ಒಂದೇ ಆದ ವಸ್ತುವಿನ ಪ್ರಸಕ್ತಿಯೇ ಸಂಭಾವಿತವಲ್ಲ. ಈ ನಿಮಿತ್ತದಿಂದ ಲೌಕಿಕವಾಗಿ ಎಂದರೆ ಶ್ರುತಿಯನ್ನು ಬಿಟ್ಟು ಸರ್ವನಿಯಾಮಕ ವಸ್ತುವಿನ ವಿಚಾರವು ನಿರರ್ಥಕವಾದುದು.

ವೇದವಾದರೊ ತನ್ನ ಸರ್ವಾಂಶದಿಂದಲೂ ಸರ್ವನಿಯಾಮಕ ವಸ್ತುವನ್ನು ಸಾಧಿಸಿಕೊಡುವುದು. ಅದು ಪ್ರತ್ಯಂಶದಲ್ಲಿಯೂ ಪರಸ್ಪರ ಸಮನ್ವಿತವಾಗುವುದು. ಅದರಲ್ಲಿ ಸ್ವವ್ಯಾಹತಿಯಿಲ್ಲ. ಅದಕ್ಕೆ ಬಾಧಕವಾದ ಮತ್ತೊಂದು ಭಾವವಿರುವುದಿಲ್ಲ. ಅದು ಅನಾದಿ ಅಪೌರುಷೇಯವಾದುದರಿಂದ ಅದಕ್ಕೆ ಮೂಲವೇನೆಂಬ ಪ್ರಶ್ನೆಯೇ ಹುಟ್ಟುವುದಿಲ್ಲ. ಅದನ್ನು ವ್ಯಾಖ್ಯಾನಮಾಡುವ

ಕ್ರಮವು ಲೌಕಿಕ ವಾಕ್ಯಕ್ಕೆ ಅನ್ವಯಿಸುವುದೂ ಇಲ್ಲ. ಲೌಕಿಕ ವಾಕ್ಯವು ಅಜ್ಞನಾದ ಪುರುಷಮೂಲಕವಾದುದು. ಅಪೌರುಷೇಯವಾದ ವೇದವಾದರೊ ಸ್ವತಃಪ್ರಮಾಣವಾದುದು. ಅದರ ಪ್ರಾಮಾಣ್ಯವನ್ನು ಸಾಧಿಸಲು ಪ್ರಮಾಣಾಂತರ ಬೇಕಾಗುದಿಲ್ಲ. ಅದು ನಿತ್ಯ, ನಿರ್ದೋಷ, ಅಪೌರುಷೇಯ ಮತ್ತು ಸ್ವತಃಪ್ರಮಾಣ.

ಈ ಅಂಶಗಳೆಲ್ಲ ಶಾಸ್ತ್ರಾಧ್ಯಯನದಿಂದಲೇ ಜ್ಞಾತವಾಗಬೇಕಾದುವು. ಪ್ರಕೃತ ವಿಚಾರಕ್ಕೆ ಬೇಕಾಗುವ ವಿಷಯಗಳನ್ನು ಮಾತ್ರ ಇಲ್ಲಿ ಸಂಗ್ರಹಿಸಿದೆ.

ಸರ್ವನಿಯಾಮಕ ತತ್ತ್ವವನ್ನು ಶ್ರುತಿಯಿಂದಲೇ ನಿರ್ಣಯಿಸಬೇಕಾದ ಸಂದರ್ಭದಲ್ಲಿ ಶ್ರುತಿಸಂಪ್ರದಾಯಕ್ಕೆ ಅನ್ವಯಿಸುವ ವಿಚಾರದ ಮಹಿಮೆಯಿಂದ ಸರ್ವನಿಯಾಮಕವಾದ ತತ್ತ್ವವು ವಿಷ್ಣು ಎಂದು ಪ್ರತಿಪಾದಿತವಾಗಿರುವುದು. ಈ ವಿಷ್ಣುವಿಗೆ ಎಂದರೆ ಶ್ರುತ್ಯುಕ್ತ ವಿಷ್ಣುವಿಗೇ ನಾರಾಯಣ ಮುಂತಾದುವು ಪರ್ಯಾಯ ಶಬ್ದಗಳು. ಇವನನ್ನೇ ಬ್ರಹ್ಮನೆಂದು ಈ ಉಪನಿಷತ್ತೂ ಸಿದ್ಧಾಂತಿಸುವುದು. ಇದಕ್ಕೆ ಅನುಗುಣವಾಗಿಯೇ 'ಸ ವಿಷ್ಣುರಾಹ ಹಿ' 'ತಂ ಬ್ರಹ್ಮೇತ್ಯಾಚಕ್ಷತೆ' ಎಂದು ಶ್ರುತ್ಯುಕ್ತ ವಿಷ್ಣುವೇ ಬ್ರಹ್ಮ ಎಂದರೆ ಶ್ರುತ್ಯುಕ್ತ ಬ್ರಹ್ಮ ಶಬ್ದವಾಚ್ಯ ಎಂಬ ಅರ್ಥವನ್ನು ಕೊಡುವ ಬಾದರಾಯಣಕೃತ ಸೂತ್ರಗಳಿರುವುವು. ಈ ಪ್ರಮೇಯಗಳನ್ನು ಪೂರ್ವರಂಗದಲ್ಲಿಟ್ಟು 'ಓಂ ಅಥಾತೊ ಬ್ರಹ್ಮಜಿಜ್ಞಾಸಾ ಓಂ' ಎಂಬ ಬ್ರಹ್ಮಸೂತ್ರವು ಪ್ರವೃತ್ತವಾಗಿರುವುದು. ಈ ಬ್ರಹ್ಮ ಶಬ್ದದ ಅರ್ಥವನ್ನು ಹೇಳುವ ಶ್ರೀಮದಾಚಾರ್ಯರು 'ಬ್ರಹ್ಮಶಬ್ದಶ್ಚ ವಿಷ್ಣಾವೇವ' ಎಂದು ಬ್ರಹ್ಮಶಬ್ದವು ವಿಷ್ಣು ಎಂಬ ಅರ್ಥವನ್ನು ಕೊಡುವುದು ಎಂದು ಸಿದ್ಧಾಂತಿಸಿರುವರು.

ಭಾಷ್ಯಸ್ಥವಾದ ಸರ್ವಜ್ಞ, ಸರ್ವವ್ಯಾಪ್ತ ಎಂಬೀ ಮುಂತಾದ ಪದಗಳನ್ನು ಪ್ರತಿಪಾದ್ಯವಾದ ವಿಷ್ಣುತತ್ತ್ವಕ್ಕೆ ಅನುಗುಣವಾಗಿ ವ್ಯಾಖ್ಯಾನ ಮಾಡಬೇಕು. 'ಓಂ ಅನುಕೃತೇಸ್ತಸ್ಯ ಚ ಓಂ' ಎಂಬ ಬ್ರಹ್ಮಸೂತ್ರ ನಿರ್ಣಯಕ್ಕೆ ಅನುಗುಣವಾಗಿ ಸರ್ವಜ್ಞ ಎಂದರೆ ಸರ್ವಪ್ರವರ್ತಕ ಜ್ಞಾನರೂಪ ಎಂದು ಅರ್ಥ. 'ಓಂ ಅಂತರ್ಯಾಮ್ಯಧಿದೈವಾದಿಷು ತದ್ಧರ್ಮವ್ಯಪದೇಶಾತ್ ಓಂ' ಎಂಬೀ ಮುಂತಾದ ಸೂತ್ರಸಂದರ್ಭ ದೃಷ್ಟಿಯಿಂದ ಭಾಷ್ಯದಲ್ಲಿ ಸ್ಪಷ್ಟಪಟ್ಟಿರುವಂತೆ ಸರ್ವವ್ಯಾಪ್ತನೆಂದರೆ ಸರ್ವಸತ್ತಾಪ್ರದ ಎಂದು ಅರ್ಥ

ಭಜನೀಯವಾದುದರಿಂದ ತದ್ವನಂ ಎಂಬ ಹೆಸರುಳ್ಳವನು. ತದ್ವನಂ ಇತಿ–ತದ್ವನಂ ಎಂದು. ಉಪಾಸಿತವ್ಯಂ–ಉಪಾಸನಮಾಡಲ್ಪಡಬೇಕು.

೪ — ೪

ನಾಲ್ಕನೆಯ ಖಂಡದ ನಾಲ್ಕನೆಯ ಮಂತ್ರವನ್ನು ಖಂಡಾರ್ಥವು ಈ ರೀತಿ ಪರಿಚಯಮಾಡಿಸುವುದು.

ತದ್ವನಮಿತಿ ಉಪಾಸಕಸ್ಯ ಫಲಮಾಹ। ಸಯ ಇತಿ।

ತದ್ವನಂ ಇತಿ–ತದ್ವನಂ ಎಂದು. ಉಪಾಸಕಸ್ಯ –ಉಪಾಸನ ಮಾಡುವವನಿಗೆ. (ಆಗುವ) ಫಲಂ–ಫಲವನ್ನು. ಆಹ–ಹೇಳುತ್ತಾನೆ. ಸಯ ಇತಿ –ಸಯ ಎಂದು ಆರಂಭಿಸುವ ನಾಲ್ಕನೆಯ ಮಂತ್ರದಿಂದ.

ಮಂತ್ರ

ಸ ಯ ಏತದೇವಂ ವೇದಾಭಿಹ್ಯೆನಂ ಸರ್ವಾಣಿ ಭೂತಾನಿ ಸಂವಾಂಛಂತಿ
ಉಪನಿಷದಂ ಭೋ ಬ್ರೂಹೀತಿ । ಉಕ್ತಾತ ಉಪನಿಷತ್ ।
ಬ್ರಾಹ್ಮೀಂ ವಾವ ತ ಉಪನಿಷದಮಬ್ರೂಮೇತಿ ।
ತಸ್ಯೈ ತಪೋ ದಮಃ ಕರ್ಮೇತಿ ಪ್ರತಿಷ್ಠಾ ।
ವೇದಾಃ ಸರ್ವಾಂಗಾನಿ ಸತ್ಯಮಾಯತನಂ ।
ಯೊ ಹ ವಾ ಏತಾಮುಪನಿಷದಮೇವಂ
ವೇದಾಪಹತ್ಯ ಪಾಪ್ಮಾನಮನಂತೆ ಸ್ವರ್ಗೆ ಲೋಕೆ ।
ಜ್ಯೇಯೆ ಪ್ರತಿತಿಷ್ಠತಿ ಜ್ಯೇಯೆ ಪ್ರತಿತಿಷ್ಠತಿ ॥೪–೪॥

ಪದವಿಭಾಗ:— ಸಃ. ಯಃ. ಏತತ್. ಏವಂ. ವೇದ. ಅಭಿ. ಹಿ. ಏನಂ. ಸರ್ವಾಣಿ. ಭೂತಾನಿ. ಸಂವಾಂಛಂತಿ. ಉಪನಿಷದಂ. ಭೊ. ಬ್ರೂಹಿ. ಇತಿ. ಉಕ್ತಾ. ತೆ. ಉಪನಿಷತ್. ಬ್ರಾಹ್ಮೀಂ. ವಾವ. ತೆ. ಉಪನಿಷದಂ. ಅಬ್ರೂಮ. ಇತಿ. ತಸ್ಯೈ. ತಪಃ. ದಮಃ. ಕರ್ಮ. ಇತಿ. ಪ್ರತಿಷ್ಠಾ. ವೇದಾಃ. ಸರ್ವಾಂಗಾನಿ. ಸತ್ಯಂ. ಆಯತನಂ. ಯಃ. ಹ. ವಾ. ಏತಾಂ. ಉಪನಿಷದಂ. ಏವಂ. ವೇದ. ಅಪಹತ್ಯ. ಪಾಪ್ಮಾನಂ. ಅನಂತೆ. ಸ್ವರ್ಗೆ. ಲೋಕೆ. ಜ್ಯೇಯೆ. ಪ್ರತಿತಿಷ್ಠತಿ. ಜ್ಯೇಯೆ. ಪ್ರತಿತಿಷ್ಠತಿ.॥ಅನ್ವಯವು ಸ್ಪಷ್ಟ.

ಖಂಡಾರ್ಥ

ಸ ಪ್ರಸಿದ್ಧೋಽಧಿಕಾರೀ। ಏತದ್ಬ್ರಹ್ಮ ಏವಂ ತದ್ವನಮಿತ್ಯೇವಂ ರೂಪೇಣ ವೇದ। ಏನಂ ತದ್ವನತ್ವಜ್ಞಾನಿನಂ ಸರ್ವಾಣಿ ಭೂತಾನಿ ಅಭಿ ವಾಂಛಂತಿ। ಸರ್ವಾಪೇಕ್ಷಿತೊ ಭವತೀತ್ಯರ್ಥಃ। ಏವಂ ಶ್ರುತ್ವಾ ಪುನಃ ಬ್ರಹ್ಮಾಣಂ ಪೃಚ್ಛತಿ ಉಮಾಪತಿಃ। ಉಪನಿಷದಂ ಭೊ ಬ್ರೂಹೀತಿ। ಭೊ ಬ್ರಹ್ಮನ್ ಉಪನಿಷದಂ ಸಪ್ರತಿಷ್ಠಾಂ ಸಾಯತನಾಂ ಬ್ರೂಹೀತಿ ಅಪೃಚ್ಛತ್ ಇತಿ ಶೇಷಃ। ಕಿಮುಪನಿಷತ್ಪ್ರತಿಪಾದ್ಯಂ ಪೃಚ್ಛಸಿ। ಉತ ಉಪನಿಷದುತ್ಪನ್ನವಿದ್ಯಾಯಾಃ ಅವಸ್ಥಾನಕಾರಣಂ ಕಿಂ ವಾ ವಿದ್ಯಾಯಾಃ ಕರಣಂ ಇತಿ ಹೃದಿ ವಿಕಲ್ಪ್ಯ ಕ್ರಮೇಣ ಉತ್ತರಮಾಹ। ಉಕ್ತಾತ ಇತಿ।

ತೆ ತುಭ್ಯಂ ಬ್ರಾಹ್ಮೀಂ ಬ್ರಹ್ಮವಿಷಯಾಂ ವಾ ವೇತ್ಯಸಂಶಯಂ। ತೆ ಉಪನಿಷದಂ ಉಪನಿಷತ್‌ಸ್ವರೂಪಂ ಅಬ್ರೂಮ ಅವೋಚಾಮೇತಿ ಬ್ರಹ್ಮಾ ಉವಾಚ ಇತಿ ಯೋಜ್ಯಂ। ಬ್ರಹ್ಮೇತಿ ಹೊವಾಚ ಇತ್ಯಾದಿನಾ ಬ್ರಹ್ಮ ಸ್ವರೂಪೋಕ್ತೆಃ। ತತ್ರ ವಕ್ತವ್ಯಂ ಕಿಮಪಿ ನೇತಿ ಭಾವಃ। ತಸ್ಯೈ ತಸ್ಯಾಃ ಬ್ರಹ್ಮವಿದ್ಯಾಯಾಃ ತಪೊ ದಮಃ ಕರ್ಮ ಚ ಪ್ರತಿಷ್ಠಾ। ತಪಃ ಕೃಚ್ಛ್ರ, ಚಾಂದ್ರಾಯಣಾದಿ। ಶಾಸ್ತ್ರಪರ್ಯಾಲೋಚನಂ ವಾ। ದಮಃ ಇಂದ್ರಿಯ ನಿಗ್ರಹಃ। ಕರ್ಮ ತು ವರ್ಣಾಶ್ರಮೋಚಿತಂ ಕ್ರಿಯಾನುಷ್ಠಾನಂ। ಪ್ರತಿಷ್ಠಾ ಪ್ರತಿಷ್ಠಾಹೇತುಃ। ತಪಆದಿಷು ಸತ್ಸು ವಿದ್ಯಾ ಪ್ರತಿತಿಷ್ಠತಿ ಇತ್ಯರ್ಥಃ।

ವೇದಾಃ ಋಗಾದ್ಯಾಃ। ತದನುಕೂಲಗ್ರಂಥಾಶ್ಚ। ಶಿಕ್ಷಾ ಕಲ್ಪೊ ವ್ಯಾಕರಣಂ ನಿರುಕ್ತಂ ಛಂದೊ ಜ್ಯೋತಿಷಂ ಇತಿ ಷಡಂಗರೂಪಸರ್ವಾಂಗಾನಿ। ಸತ್ಯಂ ಮೀಮಾಂಸಾ। ಆಯತನಂ ಉತ್ಪತ್ತಿಸ್ಥಾನಂ। ತಸ್ಯಾಃ ಇತ್ಯನುಷಂಗಃ। ವಿದ್ಯಾಯಾ ಇತ್ಯರ್ಥಃ। ಏತದುಪನಿಷದ್‌ಜ್ಞಾನಿನಃ ಫಲಮಾಹ। ಯ ಇತಿ। ಯೋಽಧಿಕಾರೀ ಏತಾಂ ಉಪನಿಷದಂ ವೇದ ಸಃ ಪಾಪ್ಮಾನಂ ಅಪಹತ್ಯ ಅನಂತೆ ದೇಶಕಾಲಗುಣಾಽಪರಿಚ್ಛಿನ್ನೆ ಸ್ವರ್ಗೆ ಸ್ವರೂಪಭೂತಸುಖಜ್ಞಾನಾತ್ಮಕೆ ಲೋಕೆ ಪ್ರಕಾಶರೂಪೆ ಜ್ಯೇಯೆ ಶ್ರೇಷ್ಠೆ ಬ್ರಹ್ಮಣಿ ಇತಿ ಯೋಜ್ಯಂ। ಪ್ರತಿತಿಷ್ಠತಿ ಪ್ರತಿತಿಷ್ಠತಿ। ದ್ವಿರುಕ್ತಿಃ ಸರ್ವಾವಧಾರಣಾರ್ಥಾ ॥೪॥ ಇತಿ ಚತುರ್ಥಃ ಖಂಡಃ ॥೪॥

ಸಃ–ಪ್ರಸಿದ್ಧಃ. ಅಧಿಕಾರೀ–ಹಿಂದೆ ಮಂತ್ರದಲ್ಲಿ ಬ್ರಹ್ಮ ವಿದ್ಯೆಗೆ ಅರ್ಹತೆಯನ್ನು ಹೊಂದಿದವನು. ಏತತ್–ಈ. ಬ್ರಹ್ಮ–ಬ್ರಹ್ಮನನ್ನು. ಏವಂ–ತದ್ವನಂ ಇತಿ ಏವಂ ರೂಪೇಣ–ತದ್ವನಂ ಎಂಬ ಪ್ರಕಾರವಾಗಿ. ವೇದ–ತಿಳಿಯುತ್ತಾನೆಯೊ. ಏನಂ–ಈ. ತದ್ವನತ್ವಜ್ಞಾನಿನಂ–ತದ್ವನಂ ಎಂಬುದರ ತತ್ತ್ವವನ್ನು ತಿಳಿದ ಜ್ಞಾನಿಯನ್ನು. ಸರ್ವಾಣಿ–ಸಮಸ್ತವಾದ. ಭೂತಾನಿ–ಪ್ರಾಣಿಗಳು. ಅಭಿವಾಂಛಂತಿ–ಅಪೇಕ್ಷಿಸುವುವು. ಸರ್ವಾಪೇಕ್ಷಿತೊ ಭವತಿ–ಸರ್ವರಿಂದಲೂ ಅಪೇಕ್ಷಿತನು ಆಗುತ್ತಾನೆ. ಇತಿ ಅರ್ಥಃ–ಹೀಗೆ ಅರ್ಥ.

ಏವಂ–ಈ ರೀತಿಯಾಗಿ. ಶ್ರುತ್ವಾ–ಕೇಳಿ. ಪುನಃ–ಮರಳಿ. ಬ್ರಹ್ಮಾಣಂ–ಚತುರ್ಮುಖನನ್ನು. ಉಮಾಪತಿಃ–ಉಮಾದೇವಿಯ ಪತಿಯಾದ ಶಿವನು. ಪೃಚ್ಛತಿ–ಕೇಳುತ್ತಾನೆ. ಉಪನಿಷದಂ ಭೊ ಬ್ರೂಹಿ ಇತಿ–ಈ ರೀತಿಯಾಗಿ ಕೇಳುತ್ತಾನೆ. (ಇದರ ಅರ್ಥ) ಭೊ ಬ್ರಹ್ಮನ್–ಎಲೈ ಚತುರ್ಮುಖನೆ! ಉಪನಿಷದಂ–ಉಪನಿಷತ್ತನ್ನು. ಸಪ್ರತಿಷ್ಠಾಂ–ಅದು ಪ್ರತಿಷ್ಠಿತವಾಗುವ ರೀತಿಯಿಂದ ಸಹಿತ. ಸಾಯತನಾಂ–ಅದಕ್ಕೆ ಆಶ್ರಯ ಯಾವುದೊ ಅದರ ಸಹಿತ. ಬ್ರೂಹಿ–ಹೇಳು. ಇತಿ–ಹೀಗೆ. ಅಪೃಚ್ಛತ್–ಕೇಳಿದನು. ಇತಿ–ಹೀಗೆಂದು. ಶೇಷಃ–ಸಂಬಂಧಿಸಿಕೊಳ್ಳಬೇಕು.

ಉಪನಿಷತ್ಪ್ರತಿಪಾದ್ಯಂ – ಉಪನಿಷತ್ತಿನಲ್ಲಿ ಪ್ರತಿಪಾದಿತವಾಗುವ ವಿಷಯವನ್ನು. ಪೃಚ್ಛಸಿ ಕಿಂ – ಕೇಳುತ್ತೀಯಾ ? ಉತ – ಅಥವಾ. ಉಪನಿಷದುತ್ಪನ್ನ ವಿದ್ಯಾಯಾಃ – ಉಪನಿಷತ್ತಿನಿಂದ ಹುಟ್ಟಿದ ವಿದ್ಯೆಗೆ. ಅವಸ್ಥಾನಕಾರಣಂ - ಅದು ಪ್ರತಿಷ್ಠಿತವಾಗಲು ಸಾಧನವಾದುದನ್ನು. [ಕೇಳುತ್ತೀಯಾ ?] ವಾ –ಅಥವಾ. ವಿದ್ಯಾಯಾಃ – ವಿದ್ಯೆಗೆ. ಕಾರಣಂ–ಸಾಧನವನ್ನು [ಕೇಳುತ್ತೀಯೊ ?] ಕಿಂ – ಏನು ? ಇತಿ – ಹೀಗೆಂದು. ಹೃದಿ – ಮನಸ್ಸಿನಲ್ಲಿ. ವಿಕಲ್ಪ್ಯ – ಕಲ್ಪಗಳನ್ನು ಭಾವಿಸಿ. ಕ್ರಮೇಣ – ಕ್ರಮವಾಗಿ. ಉತ್ತರಂ – ಉತ್ತರವನ್ನು. ಆಹ – ಹೇಳುತ್ತಾನೆ. ಉಕ್ತಾ ತ ಇತಿ – ಉಕ್ತಾ ತೆ ಎಂದು ಆರಂಭಿಸುವ ಮಂತ್ರಭಾಗದಿಂದ.

ತೆ – ತುಭ್ಯಂ – ನಿನಗೆ. ಬ್ರಾಹ್ಮೀಂ – ಬ್ರಹ್ಮವಿಷಯಾಂ – ಬ್ರಹ್ಮನ ವಿಷಯದಲ್ಲಿ ಪ್ರವೃತ್ತವಾದುದನ್ನು. ವಾ – ವೇತಿ ಅಸಂಶಯಂ–ವಾ

ಎಂದು ಸಂಶಯದ ಅಭಾವವನ್ನು ಹೇಳುವುದು. ತೆ – ನಿನಗೆ. ಉಪನಿಷದಂ – ಉಪನಿಷತ್ಸ್ವರೂಪಂ – ಉಪನಿಷತ್ತಿನ ಸ್ವರೂಪವನ್ನು. ಅಬ್ರೂಮ – ಅವೋಚಾಮ – ಹೇಳಿರುವೆವು. ಇತಿ– ಹೀಗೆ. ಬ್ರಹ್ಮಾ– ಚತುರ್ಮುಖನು. ಉವಾಚ – ಹೇಳಿದನು. ಇತಿ – ಹೀಗೆ. ಯೋಜ್ಯಂ – ಯೋಜನೆ ಹೊಂದಲ್ಪಡಬೇಕು. "ಬ್ರಹ್ಮೇತಿ ಹೋವಾಚ" ಇತ್ಯಾದಿನಾ – "ಬ್ರಹ್ಮನೆಂದು ಹೇಳಿದನು." ಇದೇ ಮುಂತಾಗಿ. ಬ್ರಹ್ಮಸ್ವರೂಪೋಕ್ತೇಃ–ಬ್ರಹ್ಮಸ್ವರೂಪದ ಹೇಳಿಕೆ ಇರೋಣದರಿಂದ. ತತ್ರ– ಈ ವಿಷಯದಲ್ಲಿ. ವಕ್ತವ್ಯಂ – ಹೇಳಲ್ಪಡಬೇಕಾದುದು. ಕಿಂ ಅಪಿ – ಯಾವುದೂ. ನ – ಇಲ್ಲ. ಇತಿ – ಹೀಗೆ. ಭಾವಃ – ಅಭಿಪ್ರಾಯವು.

ತಸ್ಯೈ – ತಸ್ಯಾಃ – ಆ. ಬ್ರಹ್ಮವಿದ್ಯಾಯಾಃ – ಬ್ರಹ್ಮವಿದ್ಯೆಗೆ. ತಪಃ – ತಪಸ್ಸು. ದಮಃ – ಇಂದ್ರಿಯನಿಗ್ರಹ. ಕರ್ಮ – ವರ್ಣಾಶ್ರಮೋಚಿತ ಕರ್ಮ. ಪ್ರತಿಷ್ಠಾ–ಪ್ರತಿಷ್ಠೆಯು. ತಪಃ –ಕೃಚ್ಛ್ರಚಾಂದ್ರಾಯಣಾದಿ – ಕೃಚ್ಛ್ರಚಾಂದ್ರಾಯಣ ಮುಂತಾದುದು. ಶಾಸ್ತ್ರಪರ್ಯಾಲೋಚನಂ ವಾ – ಶಾಸ್ತ್ರದ ಪರ್ಯಾಲೋಚನೆಯೇ ಈ ತಪಶ್ಶಬ್ದದ ಫಲಿತಾರ್ಥ. ದಮಃ – ಇಂದ್ರಿಯನಿಗ್ರಹಃ – ಇಂದ್ರಿಯಗಳ ನಿಗ್ರಹವು. ಕರ್ಮ ತು – ಕರ್ಮವಾದರೊ. ವರ್ಣಾಶ್ರಮೋಚಿತಂ ಕ್ರಿಯಾನುಷ್ಠಾನಂ –ವರ್ಣ ಮತ್ತು ಆಶ್ರಮ ಇವುಗಳಿಗೆ ಉಚಿತವಾದ ಕ್ರಿಯೆಯ ಅನುಷ್ಠಾನವು. ಪ್ರತಿಷ್ಠಾ – ಪ್ರತಿಷ್ಠಾಹೇತುಃ – ಪ್ರತಿಷ್ಠವಾಗಲು ಕಾರಣ. ತಪ ಆದಿಮತ್ಸು – ತಪಸ್ಸೇ ಮೊದಲಾಗಿ ಉಳ್ಳವರಲ್ಲಿ. ವಿದ್ಯಾ–ವಿದ್ಯೆಯು. ಪ್ರತಿತಿಷ್ಠತಿ – ಪ್ರತಿಷ್ಠಿತವಾಗುತ್ತದೆ. ಇತಿ – ಹೀಗೆ. ಅರ್ಥಃ – ಅರ್ಥವು. ವೇದಾಃ – ಋಗಾದ್ಯಾಃ–ಋಗ್ವೇದ ಮೊದಲಾದುವು. ತದನುಕೂಲ ಗ್ರಂಥಾಶ್ಚ – ಅವಕ್ಕೆ ಅನುಕೂಲವಾದ ಗ್ರಂಥಗಳು. ಶಿಕ್ಷಾ-ಶಿಕ್ಷೆಯು. ಕಲ್ಪಃ– ಕಲ್ಪವು. ವ್ಯಾಕರಣಂ - ವ್ಯಾಕರಣವು. ನಿರುಕ್ತಂ – ನಿರುಕ್ತವು. ಛಂದಃ–ಛಂದಸ್ಸು ಜ್ಯೋತಿಷಂ– ಜ್ಯೋತಿಷವು. ಇತಿ – ಹೀಗೆಂಬಿವು. ಷಡಂಗರೂಪಸರ್ವಾಂಗಾನಿ – ಆರು ಅಂಗಗಳೆಂಬ ಸಮಸ್ತ ಅಂಗಗಳು. ಸತ್ಯಂ–ಮೀಮಾಂಸಾ-ಬ್ರಹ್ಮ ಮೀಮಾಂಸಾಶಾಸ್ತ್ರವು. ಆಯತನಂ – ಉತ್ಪತ್ತಿಸ್ಥಾನಂ. ತಸ್ಯಾಃ

ಸತ್ಯಂ ಎಂದರೆ ಮೀಮಾಂಸಾ ಎಂದು ಖಂಡಾರ್ಥ. ಇದೇ ಬ್ರಹ್ಮ ಮೀಮಾಂಸಾ. ಇದಿಲ್ಲದೆ ವೇದಾರ್ಥ ಸಂಭವವಿಲ್ಲ. ವೇದಾನುಕೂಲ ಗ್ರಂಥಗಳು ಶಾಸ್ತ್ರಪ್ರಮೇಯವನ್ನು ಪ್ರತಿಪಾದಿಸುವ ಸ್ಮೃತಿಗಳು. ಇವು ನಿಯಮವಾಗಿ ವೈಷ್ಣವ ಸ್ಮೃತಿಗಳು. ಇವು ಬ್ರಹ್ಮಮೀಮಾಂಸಾನುಗೃಹೀತವಾದರೆ ಮಾತ್ರ ವೇದಾರ್ಥಕ್ಕೆ ಉಪಪಾದಕವಾಗುವುವು. ಶಿಕ್ಷಾ ಮುಂತಾದ ಅಂಗ ಶಾಸ್ತ್ರಗಳಿಗೂ ಇದೇ ನ್ಯಾಯವೇ ಅನ್ವಯಿಸುವುದು. "ಶಬ್ದ ಜಾತಸ್ಯ ಸರ್ವಸ್ಯ ಯತ್ಪ್ರಮಾಣಶ್ಚ ನಿರ್ಣಯಃ." (ಸಮಸ್ತ ಶಬ್ದ ಸಮೂಹದ ನಿರ್ಣೀತವಾದ ಅರ್ಥವು ಬ್ರಹ್ಮ ಮೀಮಾಂಸಾಶಾಸ್ತ್ರವನ್ನೇ ಪ್ರಮಾಣವನ್ನಾಗಿ ಹೊಂದಿರುವುದು.) ಎಂದು ಭಾಷ್ಯಾಕಾರರು ಸಿದ್ಧಾಂತಿಸಿರುವುದನ್ನು ಯಾವಾಗಲೂ ಮರೆಯಬಾರದು.

ಈ ಉಪನಿಷತ್ತನ್ನು ತಿಳಿದ ಜ್ಞಾನಿಯು ಪಾಪರಹಿತನಾಗಿ ಆತ್ಮಸ್ವರೂಪವಾದ ಸುಖ ಮತ್ತು ಜ್ಞಾನರೂಪವಾದ ದೇಶಕಾಲಗುಣಗಳಿಂದ ಪರಿಚ್ಛಿನ್ನವಲ್ಲದ ಪ್ರಕಾಶರೂಪವಾದ ಸ್ವರ್ಗಸ್ವರೂಪನಾದ ಸರ್ವೋತ್ತಮನಾದ ವಿಷ್ಣುವನ್ನು ಹೊಂದುವನು. ವಿಷ್ಣುವೇ ಜೀವನಸ್ವರೂಪ ಎಂದು ಶಾಸ್ತ್ರಾರ್ಥ.

ಭಾಷ್ಯ

ಏವಮೇನಂ ತು ಯೋ ವೇದ ಭವೇತ್ ಸರ್ವೈರಪೇಕ್ಷಿತಃ।
ಏತಚ್ಛ್ರುತ್ವಾ ಹರೋಽಪೃಚ್ಛತ್ ಬ್ರಹ್ಮಾಣಂ ಪುನರೇವ ತು।
ವಿದ್ಯಾಕಾರಂ ಮಮ ಬ್ರೂಹೀತ್ಯುಕ್ತೋ ಬ್ರಹ್ಮಾಹ ತಂ ಪುನಃ।
ವಿದ್ಯಾವೇದ್ಯಂ ತವ ಪ್ರೋಕ್ತಮಾಸ್ಥಾನಂ ತೇ ವದಾಮ್ಯಹಂ।
ತಪೋದಮಸ್ವಧರ್ಮೇಷು ಯೇ ಸ್ಥಿತಾಸ್ತೇಷು ತಿಷ್ಠತಿ।
ವಿದ್ಯಾಸ್ಥಾನಾನಿ ತಸ್ಯಾಸ್ತು ವೇದಾ ಅಂಗಾನಿ ನಿರ್ಣಯಃ।
ವೇದ್ಯೈತಾಮೇವಮಖಿಲಂ ಯೋ ವಿಷ್ಣೌ ಪ್ರತಿತಿಷ್ಠತೀತ್ಯಾದಿ
ಬ್ರಹ್ಮಸಾರೇ।
ವಿದ್ಯುತಃ ಸೂರ್ಯಾದಿಪ್ರಕಾಶಾನ್ ಆ ಸಮಂತಾತ್
ವ್ಯದ್ಯುತತ್ ಪ್ರಾಕಾಶಯತ್।
ಯದಾದಿತ್ಯಗತಂ ತೇಜೋ ಜಗದ್ಭಾಸಯತೇಽಖಿಲಂ।
ಯಚ್ಚಂದ್ರಮಸಿ ಯಚ್ಚಾಗ್ನೌ ತತ್ತೇಜೋ ವಿದ್ಧಿ ಮಾಮಕಂ ಇತಿ ವಚನಾತ್।

ತಮೇವ ಭಾಂತಮನುಭಾತಿ ಸರ್ವಂ ತಸ್ಯ ಭಾಸಾ ಸರ್ವಮಿದಂ ವಿಭಾತೀತಿ ಚ।
ನ್ಯಮೀಮಿಷದಾಸಮಂತಾನ್ನಿಮೀಲಿತಾಕ್ಷಮಭವತ್।
ಸ ವೈ ಕಿಲಾಯಂ ಪುರುಷಃ ಪುರಾತನೋ ಯ ಏಕ ಆಸೀತ್ ಅವಿಶೇಷ ಆತ್ಮನಿ।
ಅಗ್ರೇ ಗುಣೇಭ್ಯೋ ಜಗದಾತ್ಮನೀಶ್ವರೇ ನಿಮೀಲಿತಾತ್ಮಾ ನಿಶಿ ಸುಪ್ತಶಕ್ತಿಷು
ಇತಿ ವಚನಾತ್।

ಪೂರ್ಣತ್ವಾಚ್ಚ ಆಃ। ಅಭೀಕ್ಷ್ಣಂ ಸಂಕಲ್ಪ ಇತಿ ಮನಸೋ ವಿಶೇಷಣಂ। ಸಂಕಲ್ಪಕಮಿತ್ಯರ್ಥಃ। ಸಪ್ರತಿಷ್ಠಾಂ ಸಾಯತನಾಮುಪನಿಷದಂ ಬ್ರೂಹೀತ್ಯುಕ್ತೇ ಸಮ್ಯಗೇವ ಮಯೋಪನಿಷತ್ಸ್ವರೂಪಮುಕ್ತಂ। ತತ್ರ ವಕ್ತವ್ಯಂ ನಾಸ್ತಿ। ತಪೋ ದಮಃ ಕರ್ಮ ಚ ವಿದ್ಯಾಯಾಃ ಪ್ರತಿಷ್ಠಾ। ತದ್ವತ್ಸು ವಿದ್ಯಾ ಪ್ರತಿತಿಷ್ಠತೀತ್ಯರ್ಥಃ। ಸತ್ಯಮಿತಿ ಮೀಮಾಂಸಾ। ನಿರ್ಣೀಯತೇ ಯತಃ ಸಮ್ಯಗಿದಂ ಸತ್ಯಮಿತಿ ಸ್ಫುಟಂ।

ಶ್ರುತಿಸ್ಮೃತ್ಯುದಿತಂ ಸರ್ವಂ ವ್ಯಕ್ತಂ ಮೀಮಾಂಸಯೈತಯಾ।
ಸತ್ಯಮಿತ್ಯುಚ್ಯತೇ ತಸ್ಮಾತ್ ಮೀಮಾಂಸಾ ಬ್ರಹ್ಮನಿಶ್ಚಯ
ಇತಿ ಶಬ್ದ ನಿರ್ಣಯೇ।

ಋಗ್ಯಜುಃ ಸಾಮಾಥರ್ವಾದ್ಯಾಃ ಪಂಚರಾತ್ರಂ ಚ ಭಾರತಂ।
ಮೂಲರಾಮಾಯಣಂ ಚೈವ ಪುರಾಣಂ ಭಗವತ್ಪರಂ।
ವೇದಾ ಇತ್ಯುಚ್ಯತೇ ಸದ್ಭಿಃ ಶಿಕ್ಷಾದ್ಯಂ ಸ್ಮೃತಯಃ ತಥಾ।
ಅಂಗಾನಿ ಸತ್ಯಂ ಮೀಮಾಂಸಾ ತದ್ವಿದ್ಯಾಯತನಂ ತ್ರಯಮಿತಿ
ವಿದ್ಯಾನಿರ್ಣಯೇ ॥ ಖಂ ॥ ೪ ॥

ಏವಂ–ಈ ಪ್ರಕಾರವಾಗಿ. ಏನಂ–ವಿಷ್ಣುವನ್ನು. ಯಃ–ಯಾವನು. ವೇದ – ತಿಳಿಯುತ್ತಾನೆಯೋ. (ಅವನು) ಸರ್ವೈಃ – ಸಮಸ್ತರಿಂದಲೂ. ಅಪೇಕ್ಷಿತಃ– ಅಪೇಕ್ಷಿಸಲ್ಪಟ್ಟವನು. ಭವೇತ್ – ಆಗುವನು. ಏತತ್– ಇದನ್ನು. ಶ್ರುತ್ವಾ–ಕೇಳಿ. ಹರಃ–ಶಿವನು. ಬ್ರಹ್ಮಾಣಂ–ಚತುರ್ಮುಖನನ್ನು. ಪುನಃ ಏವ ತು–ಮರಳಿಯೂ ಕೂಡ. ಅಪೃಚ್ಛತ್–ಪ್ರಶ್ನಿಸಿದನು. ವಿದ್ಯಾಕಾರಂ–ವಿದ್ಯೆಯ ಆಕಾರವನ್ನು. ಮಮ–ನನಗೆ. ಬ್ರೂಹಿ–ತಿಳಿಸು. ಇತಿ–ಹೀಗೆಂದು. ಉಕ್ತಃ–ಪ್ರಶ್ನಿಸಲ್ಪಟ್ಟ. ಬ್ರಹ್ಮಾ–ಚತುರ್ಮುಖನು.

[illegible]

[illegible]

[illegible]

[illegible]

[illegible]

[illegible]

1. [illegible]
   (Mysore University Publication)
2. The Dvaita Philosophy and its place in the Vedanta (M.U.P.)
3. [illegible]
4. Madhva (Dvaita)
   Cultural Heritage of India
   Published by Ramakrishna Research Institute
5. Conception of Svatantra
   (Mysore University Journal)
7. Vedic Monism (M.U.J.)
8. Madhva's Absolutism
   (Indian Philosophical Congress, Lahore)
9. [illegible]
10. [illegible] ([illegible])

[illegible]
[illegible]
[illegible]
[illegible]

[illegible]